ಹೇಲು–ಉಚ್ಚೆಗೂ ಹೋಗದ್ರೀತಿ ಅದೆಂತಾ ಮಾಡ್ತವೋ... ಭಗವಂತನೇ ಬಲ್ಲ..." ಎಂಬ ಅವರ ನುಡಿಮುತ್ತುಗಳು ಬಿತ್ತರಗೊಳ್ಳುತ್ತಿದ್ದಂತೆಯೇ...

"ಅಲಾಲಾಲಾಲಾ! ಊರ್ತುಂಬಾ ಬರೀ ಹಡ್ಬೆ ಕುನ್ನೀ ಕಾಟ ಜೋರಾತಲಿ. ಹಪ್ಪಳನಾದ್ರೂ ಮಾಡ್ತ್ಯ, ಸಂಡ್ಗೆನಾದ್ರೂ ಮಾಡ್ತ್ಯ. ಏನೀಗ? ಕೆಲಸಿಲ್ಲದ್ದೋದ ಕುನ್ನೀದು ಬೆಳಗಂಬತ್ಲೆ ಬೌಬೌ ಚಾಲೂ ಆಗ್ತು. ಮೂರ್ಹೊತ್ತೂ ನಮ್ಮನೆ ಬಾಗ್ಲಲ್ಲೇ ಸತ್ತಿರ್ತು ಈ ಕುನ್ನಿಗೊಡ್ಡು. ಏ ತುಂಗೆ... ಒಂದು ಕೋಲು ತಾರೆ, ಇವತ್ತು ಒಂದು ಕೈ ನೋಡದೇ ಸೈ" ಎನ್ನುತ್ತಾ ಸೊಂಟಕ್ಕೆ ಸೆರಗು ಸಿಕ್ಕಿಸಿದ ಗಂಗಕ್ಕನನ್ನು ಕಂಡ ಮಾರ್ಬಲ್ ರಾಯರು ಗೊಣಗುತ್ತಾ, ಲುಂಗಿ ಕಟ್ಟಿಕೊಂಡು ಮನೆಯೊಳ ಸೇರಿದರು. ಅತ್ತೆಯ ಧ್ವನಿ ಇದ್ದಕ್ಕಿದ್ದಂತೆ ಜೋರಾದ್ದನ್ನು ಕೇಳಿದ ಸೊಸೆ ಅಂಗಳಕ್ಕೆ ಓಡೋಡಿ ಬರುವಷ್ಟರಲ್ಲಿ ಉಕ್ಕೇರಿದ ಪ್ರವಾಹ ಇಳಿಮುಖವಾಗಿತ್ತು. ಆದರೂ ಓಬವ್ವನಂತೆ ಕೈಯಲ್ಲೊಂದು ಕೋಲು ಹಿಡಿದು ಮಾರ್ಬಲ್ ರಾಯರ ಮನೆಯತ್ತ ನೋಡಿ ಮಣಗುಟ್ಟುತ್ತಿದ್ದ ಅತ್ತೆಯನ್ನು ಕಂಡ ತುಂಗೆಗೆ ನಡೆದಿದ್ದೇನು ಎಂಬುದು ಸುಮಾರಿಗೆ ಅಂದಾಜಾಗಿತ್ತು.

★★★

ನಡೆದ ವಿಷಯ ತುಂಗೆಗೆ ಅಂದಾಜಾಗದೆ ಇನ್ನೇನು? ಇದು ಇಲ್ಲಿ ನಿತ್ಯದ ರಾಮಾಯಣ! ಹಾಗಂತ ಲಾಗಾಯ್ತಿನಿಂದ ನೆರೆಯಲ್ಲಿ ಹೊರೆಯಾಗದೆ ಬಾಳಿದ ಈ ಕುಟುಂಬಗಳು ಈಗ ನಾಲ್ಕಾರು ವರ್ಷಗಳಿಂದ ಹೀಗೆ ಬೆಕ್ಕು–ನಾಯಿಗಳಂತೆ ಕಚ್ಚಾಡಿಕೊಳ್ಳುವಂತಾಗಿತ್ತು. ಮೊದಲಿಗೆ, ಇವರೆಲ್ಲಾ ಯಾರು–ಏನು ಎಂಬುದನ್ನು ಹೇಳಿಬಿಡುತ್ತೇನೆ. ಸಕ್ರೆಬೈಲಿನ ಕಾನು ಮನೆಯಿಂದ ಕವಲೊಡೆದು ಈಗಿರುವ ಕಲ್ಗದ್ದೆಯ ಮನೆಯಲ್ಲಿ ಗಂಗಕ್ಕನ ಪರಿವಾರ ಬಂದು ನೆಲೆಸಿದ್ದು ಸುಮಾರು 30 ವರ್ಷಗಳ ಹಿಂದೆಯೇ. ಕಾನ್ಮನೆಯಲ್ಲಿದ್ದಾಗಲೇ ಗಂಗಾಭವಾನಿಯ ಗಂಡ ಸೀತಾರಾಮ ತೀರಿಕೊಂಡಿದ್ದ. ಗಂಡ ಹೋದ ಮೇಲೂ ಮಾಂಗಲ್ಯ, ಕಾಲುಂಗುರ ತೆಗೆಯದ ತನ್ನ ಬಗ್ಗೆ ಕೂಡುಕುಟುಂಬದಲ್ಲಿ ಕುಟುಕು ಮಾತುಗಳು ಪದೇಪದೆ ಬಂದಿದ್ದರಿಂದ ಸಿಟ್ಟಿಗೆದ್ದ ಗಂಗಾಭವಾನಿ, ಆಗಿನ್ನೂ ಬಾಲವಾಡಿಗೆ ಹೋಗುತ್ತಿದ್ದ ತನ್ನ ಮಗ ಗಣಪತಿಯೊಂದಿಗೆ ಮನೆಯಿಂದ ಹೊರಬಿದ್ದು ಈಗಿರುವ ಕಲ್ಗದ್ದೆಯಲ್ಲಿ ನೆಲೆಸಿದ್ದಳು. ಅವಳಿಗೆ ಹೆಸರಿಗೆ ತಕ್ಕಂತೆ ಕಲ್ಲು ಗದ್ದೆಯನ್ನೇ ಸುಮಾರು 30 ಗುಂಟೆಯಷ್ಟು ನೀಡಿ ಮನೆಯಿಂದ ಸಾಗಹಾಕಲಾಗಿತ್ತು. ಕಲ್ಮನಗಳಿಗಿಂತ ಕಲ್ಗದ್ದೆಯೇ ಲೇಸು ಎಂದು ಭಾವಿಸಿದ ಗಂಗಕ್ಕ, ರಟ್ಟೆಮುರಿಯ ಗೈಯ್ದು ಗಣಪತಿಯನ್ನು ಸಾಕಿದ್ದಳು. ಹಪ್ಪಳ, ಸಂಡಿಗೆ, ಉಪ್ಪಿನಕಾಯಿ ಮಾಡಿ ಮಾರುತ್ತಿದ್ದಳು. ಹಸುವೊಂದನ್ನು ಸಾಕಿಕೊಂಡು, ಹಾಲು–ತುಪ್ಪ ಮಾರುತ್ತಿದ್ದಳು. ಸೊಪ್ಪು–ತರಕಾರಿ ಬೆಳೆಯುತ್ತಿದ್ದಳು. ಅಂತೂ ಇರುವೊಬ್ಬ ಮಗನನ್ನು ದಡ ಹತ್ತಿಸಬೇಕೆಂದು ಒದ್ದಾಡುತ್ತಿದ್ದಳು. ಆದರೆ ಓದುವುದರಲ್ಲಿ ಅಷ್ಟೇನೂ ಶಾಣ್ಯಾ ಅಲ್ಲದ ಗಣಪತಿ ಕಲಿತು ಗುಡ್ಡೆಹಾಕಿದ್ದು ಅಷ್ಟರಲ್ಲೇ ಇತ್ತು. ಹತ್ತನೇ ತರಗತಿಯ ದಂಡಯಾತ್ರೆಯ ನಂತರ ಊರಲ್ಲೇ ಇದ್ದ ಒಂದು ಗ್ಯಾರೇಜಿನಲ್ಲಿ ರಿಪೇರಿ ಕೆಲಸಕ್ಕೆ ಸೇರಿಕೊಂಡ. ಆ ಕೆಲಸದಲ್ಲಿ ಬೇಗನೇ ಪಳಗಿದ. ಕಡೆಗಂತೂ ಕಂಡಕಂಡ ಮಷೀನುಗಳೆಲ್ಲವನ್ನೂ ಬಿಚ್ಚುವುದು ಅವನ ಹವ್ಯಾಸವಾಯಿತು. ಹೀಗೆ ಶುರುವಾಗಿದ್ದು, ಮೋಟರ್ ಬೈಕ್ನಿಂದ ಹಿಡಿದು, ಟೀವಿ, ಫ್ಯಾನು, ಮಿಕ್ಸರ್‌ವರೆಗೆ ಎಲ್ಲವನ್ನೂ ರಿಪೇರಿ ಮಾಡುವಷ್ಟು ಕಲಿತ. 'ಮಾಣಿ ಅಡ್ಡಿಲ್ಲೆ. ಲಾಯ್ಕೆ ರಿಪೇರಿ ಮಾಡ್ತ' ಎಂಬುದು ಊರೊಟ್ಟಿನ ಶಿಫಾರಸ್ಸಾಗಿತ್ತು. ಅಂತೂ ಈ ಒಂದು ವಿದ್ಯೆಯಾದರೂ ತನ್ನ ಮಗನ ಕೈಹಿಡಿಯಿತಲ್ಲ ಎಂದು ಗಂಗಾಭವಾನಿಗೆ ಎಷ್ಟೋ ಸಮಾಧಾನವಾಗಿತ್ತು.

ಇದೇ ಹೊತ್ತಿನಲ್ಲಿ, 'ದುಬೈನಲ್ಲಿರುವ ತನ್ನ ಭಾವನ ಫ್ಯಾಕ್ಟರಿಗೆ ಒಳ್ಳೆಯ ಮೆಕ್ಯಾನಿಕ್ ಬೇಕಾಗಿದ್ದಾರೆ. ಕಳಿಸುವಂಗಿದ್ರೆ ನೋಡಿ' ಎನ್ನುತ್ತಾ ಸಕ್ರೆಬೈಲಿನ ಮಿನ್ನ ಒಂದು ಬೆಳ್ಳಂಬೆಳಿಗ್ಗೆ ಹಾಜರಾದ. ಮಿನ್ನನ ಅಕ್ಕ–ಭಾವ ದುಬೈನಲ್ಲಿರುವುದು, ಸಾಕಷ್ಟು ದುಡ್ಡೂ ಮಾಡಿರುವುದು ರಹಸ್ಯವೇನಾಗಿರಲಿಲ್ಲ.